ಆದ್ದರಿಂದ ತಾವು ನೋಡಿದ್ದೀರಿ ಮುಳವಾಡದಲ್ಲಿ ಬಹಳ ಫಾಸ್ಟ್ ಆಗಿ ಕೆಲಸ ಆಗಿದೆ. ಆಲಮಟ್ಟಿ ಲೆಫ್ಟ್ ಮತ್ತು ರೈಟ್ ಕೆನಾಲ್ಸ್ ಕೆಲಸ ಮುಗಿಯುತ್ತಾ ಬಂದಿದೆ. ಇದಕ್ಕೆ ಯೋಜನೆಯಲ್ಲಿ ಹಣ ಒದಗಿಸಿ ಎರಡು ಸಾವಿರ ಇಸವಿಯೊಳಗೆ ಸಂಪೂರ್ಣವಾಗಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಎಲ್ಲಾ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಸಕಲೇಶಪುರ ಹಾಗೂ ಆಲೂರು ಕ್ಷೇತ್ರಕ್ಕೆಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಹಣಬಿಡುಗಡೆ

85(194) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1995-96, 1996-97, 97-98ನೇ ಸಾಲಿನಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಸಕಲೇಶಪುರ ಆಲೂರು ಕ್ಷೇತ್ರಕ್ಕೆ ಬಿಡುಗಡೆಯಾದ ಹಣವೆಷ್ಟು? (ವರ್ಷವಾರು ವಿವರ ನೀಡುವುದು)

ಆ) ಇದರಲ್ಲಿ ಸ್ಪಿಲ್ ಓವರ್ ಎಷ್ಟು ?

ಇ) ಈ ಬಗ್ಗೆ ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು? ಈ ಕಾಮಗಾರಿಗಳು ಯಾವುವು?

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು)

ಅ) ಮಂಡಳಿಯ ಕ್ಷೇತ್ರವಾರು ಹಣ ಬಿಡುಗಡೆ ಮಾಡುವುದಿಲ್ಲ. ಅನುಷ್ಠಾನಾಧಿಕಾರಿವಾರು ಹಣ ಬಿಡುಗಡೆ ಮಾಡಲಾಗುವುದು. ಸಕಲೇಶಪುರ ಆಲೂರುಕ್ಷೇತ್ರದಲ್ಲಿಖರ್ಚುಮಾಡಿದ ವಿವರ ಈ ಕೆಳಕಂಡಂತಿದೆ.

ವರ್ಷ	ಖರ್ಚು(ಲಕ್ಷರೂ. ಗಳಲ್ಲಿ)
1995-96	34. 115
1996-97	9. 716
1997-98	37.493
1998-99	19.042
(1- 1- 1998ರವರೆಗೆ)	

ಆ) 31- 3- 1998ರವರೆಗೆ 23 ಮುಂದುವರೆದೆ ಕಾಮಗಾರಿಗಳು ಹಾಗೂ ಇದರ ಅಂದಾಜು ಮೊತ್ತ 64. 32 ಲಕ್ಷ ರೂ. ಗಳು.

ಇ) ವಿವರಗಳನ್ನು ಲಗತ್ತಿಸಲಾಗಿದೆ.

Annexure - 1

MALNAD AREA DEVELOPMENT BOARD, SHIMOGA

LIST OF SPILLOVER WORKS FOR 1998-99

DISTRICT HASSAN

CONSTITUENCY : SHAKALESHPUR

Sl. No.	Village	Prescription of the Work	Year of work	Estimate cost	Total Expenditure 7th Mar.98	Allotment for 98-99
1	2	3	4	5	6	7
TALUK:SAKELESHPUR						
		Sector : Roads & Bridges				
1.	Ajjanahalli	Asphlating in 4th km of Ajjanahalli	93 - 94	0.000	1.540	0.260
2.	Channikolu	IMPTs of Chinnikolu Agani Road	95 - 96	2.000	0.000	2.000
3.	Hettur Kerodi	Asphlating to Hettur Kerodi Road	96 - 97	5.230	0.000	5.230
4.	Devihalli	IMPTs to road from Hebbasale to Devihalli	97 - 98	1.000	0.000	0.750
5.	Arehalli Hennahalli	IMPTs to road Sakaleshpur to Herahalli	97 - 98	1.000	0.500	0.500

1	2	3	4	5	6	7
6.	Arehalli	IMPTs to road from Sakaleshpur to Arekalliroad Basavanahalli	97 - 98	1.000	0.000	1.000
7.	Sakaleshpur	IMPTs to road from Sakaleshpur General Hospital to Kadahalli road Kappinakudiely	97 - 98	2.000	0.000	1.000
8.	Dodahalli	IMPTs to road from Sodavarpet to Dodahalli	97 - 98	0.000	1.000	1.000
9.	Kudrahalli	IMPTs to Kudrahalli Tadakere village link to 4 to 6 km.	95 - 96	4.000	1.028	1.700
10.	Kattayagalli	Asphlating to Kattayahalli road to 10.22 to 12.60 km in selected streches	95 - 96	1.200	0.000	1.050
11.	Kahjarabad Subramani	Asphlating to Kanjarabad Subramanya road in 44.00 to 46.00 km.	96 - 97	0.800	4.450	2.350
12.	Kumbarahalli	Asphlating to Kumbarahalli Yedekere road in 1.20 to 4.00 km.	97 - 98	7.000	0.000	2.500
13.	Belagod	Metaling to road from Hase to Udaya via Belagod raod in 7 to 8.50 km.	97 98	1.740	0.000	1.740
14.	Hadikere	Asphlating to Hadikere Betur to Batava Sapura temple road.	94 - 95	1.500	0.000	1.500

1	2	3	4	5	6	7
15.	Habballi	Asphlating of Shukravra Santhe Kerodi to Anali road.	94 -95	2.250	0.088	1.450
16.	Hadlahalli	Providing water supply to Hadlahalli.	94 - 95	0.800	0.400	0.400
17.	Karjuvalli	Asphlate A B Road to Karvuvalli	97 - 98	2.000	0.000	1.000
18.	Hunsvavalli	Asphlting to Hunsavalli	97 - 98	2.000	0.000	1.000
19.	Karsh	Asphlating to Karshoo Harijana Colony	97 - 98	2.000	0.000	1.000
20.	Shegunahalli	IMPTs to road of Shegunahalli Colony	97 - 98	1.190	0.000	1.410
21.	Honnavalli	Asphlating to road of Honnavalli Harijan Colony.	97 - 98	2.000	0.000	1.000
22.	Alur	Construction of Education office Building	94 - 95	8.000	7.884	0.116
23.	Koodanahalli	Construction of pick up and channel	94 - 95	2.000	1.391	0.609

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಉಪಾಧ್ಯಕ್ಷರೆ, 1995-96, 1996-97, 97-98 ನೇ ಸಾಲಿನಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಸಕಲೇಶಪುರ ಆಲೂರು ಕ್ಷೇತ್ರಕ್ಕೆ ಬಿಡುಗಡೆಯಾದ ಹಣ ವೆಷ್ಟು? ವರ್ಷವಾರು ವಿವರ ನೀಡುವುದು ಎಂದು ನಾನೂ ಪ್ರಶ್ನೆ ಕೇಳಿದ್ದೆ. ಅದಕ್ಕೆ ಸರ್ಕಾರದ ಕಡೆಯಿಂದ ಏನು ಉತ್ತರ ಕೊಟ್ಟಿದ್ದಾರೆಂದರೆ ಮಂಡಳಿಯು ಕ್ಷೇತ್ರವಾರು ಹಣ ಬಿಡುಗಡೆ ಮಾಡುವುದಿಲ್ಲ. ಅನುಷ್ಠಾನಾಧಿಕಾರವಾರು ಹಣ ಬಿಡುಗಡೆ ಮಾಡಲಾಗುವುದು. ಸಕಲೇಶಪುರ ಆಲೂರು ಕ್ಷೇತ್ರದಲ್ಲಿ ಖರ್ಚು ಮಾಡಿದ ವಿವರ ಈ ಕೆಳಕಂಡಂತಿದೆ. 1995-96ರಲ್ಲಿ ರೂ. 34. 115 ಲಕ್ಷ; 1996-97ರಲ್ಲಿ ರೂ. 9. 716ಲಕ್ಷ; 1997-98ರಲ್ಲಿ ರೂ. 37.493 ಲಕ್ಷ ಜನವರಿ 1, 1998ರವರೆಗೆ 19.042 ಲಕ್ಷರೂ. ಗಳೆಂದು ಕೊಟ್ಟಿದ್ದಾರೆ. ಇವುಗಳನ್ನು ಒಟ್ಟು ಲೆಕ್ಕ ಮಾಡಿದಾಗ ಒಂದು ಕೋಟಿ ರೂ ಆಗುತ್ತದೆ. ಹಾಗೆಯೇ, ಇದರಲ್ಲಿ ಸ್ಟೆಲ್ ಓವರ್ ಎಷ್ಟು ಎಂದು ಕೇಳಿದ್ದೇನೆ. 31-3-98ರವರೆಗೆ 23 ಮುಂದುವರೆದ ಕಾಮಗಾರಿಗಳೂ ಹಾಗೂ ಇದರ ಅಂದಾಜು ಮೊತ್ತ 64. 32ಲಕ್ಷ ರೂ. ಗಳು ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಈ ಬಗ್ಗೆ ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು ವಿವರ ಕೊಡುವುದು ಎಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ವಿವರಣೆಗಳನ್ನು ಇಲ್ಲಿ ಕೊಟ್ಟಿದ್ದಾರೆ. ನಾನು ಬೆಳಿಗ್ಗೆಯಿಂದ ಲೆಕ್ಕ ಮಾಡುತ್ತಲೇ ಇದ್ದೇನೆ. ಆದರೆ ಸರಿ ಉತ್ತರ ದೊರಕುತ್ತಿಲ್ಲ. ಸರ್ಕಾರದ ಉತ್ತರದ ಪ್ರಕಾರ ಬಿಡುಗಡೆಯಾದ ಹಣ ಸುಮಾರ ಒಂದು ಕೋಟಿ ರೂ. ಆಗುತ್ತದೆ. ಅವರು ಕೊಟ್ಟಂಥ ಕಾಮಗಾರಿಗಳ ಪಟ್ಟಿಯಂತೂ ತುಂಬಾ ವಿಚಿತ್ರವಾಗಿದೆ. 1995-96ರಲ್ಲಿ ಬಿಡುಗಡೆಯಾದ ಹಣ 34. 115ಲಕ್ಷ. ಎಂದು ಏನೂ ಹೇಳುತ್ತೀರಿ, ಈ ಕಾಮಗಾರಿಯ ಎಸ್ಟಿಮೇಟ್ 7. 884ಲಕ್ಷ ಮಾತ್ರ. ಖರ್ಚು 1ಲಕ್ಷದ 28. ರೂ. 4ಲಕ್ಷದ750ನ್ನು 1998-99ಕ್ಕೆ ತೆಗದುಕೊಂಡಿದ್ದಾರೆ. ಅದೇ ರೀತಿ 1996-97ಕ್ಕೆ ರೂ. 9. ಲಕ್ಷದಲ್ಲಿ 6 ಲಕ್ಷವನ್ನು ಎಸ್ಟಿಮೇಟ್ ಮಾಡಿದ್ದಾರೆ 4 ಲಕ್ಷದ 450ನ್ನು ಖರ್ಚು ಮಾಡಿದ್ದಾರೆ. ಪುನಃ ರೂ. 7ಲಕ್ಷದ 580ನ್ನು 1998-99ಕ್ಕೆ ತೆಗೆದುಕೊಂಡರು. 1997-98ರಲ್ಲಿ ರೂ. 33 ಲಕ್ಷದ 493 ಬಿಡುಗಡೆ ಮಾಡಿ 22 ಲಕ್ಷದ 990 ಎಸ್ಟಿಮೇಟ್ ಮಾಡಿ ರೂ. 1ಲಕ್ಷದ 500ನ್ನು ಖರ್ಚು ಮಾಡಿದ್ದಾರೆ. ಈ ಎಲ್ಲಾ ಒಟ್ಟಾರೆ ಲೆಕ್ಕ ತೆಗೆದುಕೊಂಡರೆ 1 ಕೋಟಿ 49ಲಕ್ಷ ಬರುತ್ತದೆ. ಸ್ಟಿಲ್ ಓವರ್ ಪ್ರಕಾರ ಅವರ ಅಂಕಿ ಅಂಶ ಸರಿಹೊಂದುವುದಿಲ್ಲ. ಅಂದ ಮೇಲೆ ಇಲ್ಲಿ ಯಾವುದನ್ನು ಸರಿ ಎಂದು ಒಪ್ಪಿಕೊಳ್ಳಬೇಕು ಎನ್ನುವುದನ್ನು ತಾವು ಹೇಳಬೇಕು. 1995-96ರಲ್ಲಿ ಖರ್ಚು ಮತ್ತು ಕೊಟ್ಟಿರತಕ್ಕಂಥ ಹಣ 34 ಲಕ್ಷ ರೂ ಎಂದುಹೇಳಿದರೆ ನಮಗೆ ಖರ್ಚುಮತ್ತು ಕೊಟ್ಟಿರತಕ್ಕಂಥ ಹಣ 34ಲಕ್ಷರೂ ಎಂದು ಹೇಳಿದರೆ ನಮಗೆ ಖರ್ಚು ಆಗಿರತಕ್ಕಂಥ ಹಣ ಕೇವಲ ರೂ. ಒಂದು ಲಕ್ಷ. 1996-97ರಲ್ಲಿ 9ಲಕ್ಷ 716 ನೀವು ಏನು ಕೊಟ್ಟಿದ್ದೇವೆಂದು ಹೇಳುತ್ತೀರಿ, ನಮಗೆ ಖರ್ಚು ಆಗಿರತಕ್ಕಂಥದ್ದು ನಾಲ್ಕೂವರೆ ಲಕ್ಷ ಮತ್ತೆ 7 ಲಕ್ಷ ರೂ ಕಾಣಿಸುತ್ತಾ ಇದ್ದೀರಿ, 1997-98ರಲ್ಲಿ 25ಲಕ್ಷ ಕೊಟ್ಟಿದ್ದೇವೆಂದು ಹೇಳುತ್ತೀರಿ. ಒಂದೂವರೆ ಲಕ್ಷ ಖರ್ಚು ಮಾಡಿದಿರಿ ಇನ್ನು 1998-99ಕ್ಕೆ 14 ಲಕ್ಷ ತೆಗೆದು ಕೊಂಡಿದ್ದೀರಿ. ಹಾಗಾದರೆ ಇದರಲ್ಲಿ ಯಾವುದು ಸರಿ? ನಿಮ್ಮ ಮೊತ್ತದಂತೆ ಒಂದು ಕೋಟಿ ರೂ. ಲೆಕ್ಕ ಸಿಗಬೇಕಲ್ಲವೇ?

ಶ್ರೀ ಕೆ.ವೆಂಕಟೇಶ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವಪ್ಪ ನವರು ಕೇಳಿದ ಪ್ರಶ್ನೆಗೆ ನಾನು ಸಮರ್ಪಕವಾಗಿ ಉತ್ತರ ಕೊಟ್ಟಿದ್ದೇನೆ . ಅವರು ವರ್ಷಾವಾರು ಮಾಹಿತಿ ತರಿಸಿಕೊಡಬೇಕೆಂದು ಕೇಳಿದ್ದಾರೆ, ಪ್ರತಿ ವರ್ಷ ಖರ್ಚು ಆಗಿರತಕ್ಕಂಥ ಹಣದ ಬಗ್ಗೆ ಮಾತ್ರ ಇಲ್ಲಿ ಉತ್ತರದಲ್ಲಿ ಕೊಟ್ಟಿದ್ದೇವೆ. ಇದಕ್ಕೆ ಆಲೋಕೇಷನ್ ಬೇರೆಯೇ ಇದೆ. 1995-96ರಲ್ಲಿ 34 ಲಕ್ಷ ರೂ ಖರ್ಚು ಆಗಿರತಕ್ಕಂಥದ್ದು.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಕೊನೆಯ ಪ್ರಶ್ನೆ ಏನು ಕೇಳಿದ್ದೆ ಎಂದರೆ ಈ ಬಗ್ಗೆ ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು ? ಈ ಕಾಮಗಾರಿಗಳು ಯಾವುವು ನೀವು ಕೊಟ್ಟಿರತಕ್ಕಂಥ ರೂ. 34ಲಕ್ಷ ರೂ. 9 ಲಕ್ಷ ರೂ. 37ಲಕ್ಷ ರೂ. 19 ಲಕ್ಷ ಇದೆಯಾಲ್ಲ, ಆ ಹಣದಲ್ಲಿ ಯಾವ ಯಾವ ಕಾಮಗಾರಿಗಳಿಗೆ ಎಷೆಷ್ಟು ಹಣವನ್ನು ಖರ್ಚು ಮಾಡಿದಿರಿ ಎಂಬುದು ನನಗೆ ಬೇಕು. ನೀವು ಕೊಟ್ಟಿರುವುದನ್ನು ಲೆಕ್ಕ ಹಾಕಿದರೆ ಒಟ್ಟಾರೆ 18ಲಕ್ಷ ರೂ ಬರುತ್ತದೆ. ನೀವು ಕೊಟ್ಟಿರುವಂಥ ಕಾಮಗಾರಿಗಳ ಪಟ್ಟಿ ಏನು ಇದೆ, ಆ ಪಟ್ಟಿಯ ಪ್ರಕಾರ 18 ಲಕ್ಷ 281ರೂ ಬರುತ್ತದೆ. 1998-99ಕ್ಕೆ 30 ಲಕ್ಷದ 960ನ್ನು ಟ್ರಾನ್ಸ್‌ಫರ್ ಮಾಡಿಕೊಂಡಿದ್ದೀರಿ.

ಶ್ರೀ ಕೆ. ವೆಂಕಟೇಶ್ : ಮಾನ್ಯ ಉಪಾದ್ಯಕ್ಷರೆ, ಈಗ ಅವರು ಆಕ್ಷನ್ ಪ್ಲಾನ್‌ಪಟ್ಟಿಯನ್ನು ನೋಡಿಕೊಂಡು ಹೇಳುತ್ತಿದ್ದಾರೆಂದು ತೋರುತ್ತದೆ. ತಮಗೆ ಕೊಟ್ಟಿರತಕ್ಕಂಥ ಪಟ್ಟಿಯಲ್ಲಿ - 1995-96ರಲ್ಲಿ ಮುಂದುವರಿದ ಕಾಮಗಾರಿಗಳು71 ಅದರಲ್ಲಿ ರಸ್ತೆಗಳು 63, ಅದರ ಅಂದಾಜು ವೆಚ್ಚ 97ಲಕ್ಷ ರೂ.ಗಳು, ಮತ್ತು ಅಂಗನವಾಡಿ ಕಟ್ಟಡ 1 ಇದೆ. 1996-97ರಲ್ಲಿ ಮುಂದುವರಿದ ಕಾಮಗಾರಿಗಳು 14ಅದರಲ್ಲಿ 10 ರಸ್ತೆಗಳು. 1997-98ರಲ್ಲಿ ಮುಂದುವರಿದ ಕಾಮಗಾರಿಗಳು 19 ಅದರಲ್ಲಿ ರಸ್ತೆಗಳು 15, 1998-99ರಲ್ಲಿ ಮುಂದುವರಿದ ಕಾಮಗಾರಿಗಳು 23 ಹಾಗೆಯೇ 1995-96ರಲ್ಲಿ ಹೊಸ ಕಾಮಗಾರಿಗಳಿಗೆ ಕೂಡ ನಾವು ಹಣವನ್ನು ಕೊಟ್ಟು ಕೊಂಡು ಬಂದಿದ್ದೇವೆ. ಸ್ಪಿಲ್ ಓವರ್ ಹಾಗೂ ಹೊಸ ಕಾಮಗಾರಿಗಳಿಗೆ ಸೇರಿದಂತೆ ಹಣವನ್ನು ಮಂಜೂರು ಮಾಡಿದ್ದೇವೆ. ಒಟ್ಟಾರೆಯಾಗಿ ಎಷ್ಟು ಹಣ ಖರ್ಚಾಗಿದೆಯೋ ಆ ವಿವರವನ್ನು ಮಾತ್ರ ನಿಮಗೆ ಕೊಟ್ಟಿರುವ ಉತ್ತರದಲ್ಲಿ ಒದಗಿಸಲಾಗಿದೆ. ಅಲೋಕೇಶನ್ ಹಣದ ಬಗ್ಗೆ ನಾವು ಉತ್ತರದಲ್ಲಿ ತಿಳಿಸಿಲ್ಲ.

ಶ್ರೀ ಬಿ.ಬಿ.ಶಿವಪ್ಪ : ಮಾನ್ಯ ಉಪಾಧ್ಯಕ್ಷರೆ, 1995-96ರಲ್ಲಿ ಒಟ್ಟು ಖರ್ಚು ಏನೂ ಮಾಡಿಲ್ಲ. 1998-99ರಲ್ಲಿ ಅದೇ 2 ಲಕ್ಷ ರೂ.ನ್ನು ಟ್ರಾನ್ಸ್‌ಫರ್ ಮಾಡಿಕೊಂಡಿರಿ. ಈ 1 ಲಕ್ಷ ಅಥವಾ 2 ಲಕ್ಷ ವೆಚ್ಚದ ಕಾಮಗಾರಿಗಳಿಗೆಲ್ಲ 2-3ವರ್ಷ ತೆಗೆದುಕೊಳ್ಳುವುದಾದರೆ ಜಾಸ್ತಿ ಹಣದ ಕಾಮಗಾರಿಗಳನ್ನು ತೆಗೆದುಕೊಂಡಾಗ ಆಟೊಮೆಟಿಕ್ ಆಗಿ ಸ್ಪಿಲ್ ಓವರ ಆಗುತ್ತದೆ. ಮಾನ್ಯ ಅಧ್ಯಕ್ಷರು ನಮ್ಮ ಕ್ಷೇತ್ರದ ಪ್ರವಾಸ ಮಾಡುವಾಗ ಒಂದು ಸಭೆಯಲ್ಲಿ ನಾನೇ ಇದ್ದೆ. ಪ್ರತೀ ವರ್ಷ ಸಕಲೇಶಪುರ ಕ್ಷೇತ್ರಕ್ಕೆ 50 ಲಕ್ಷರೂ.ಗಳನ್ನು ಕೊಟ್ಟಿದ್ದೇವೆ ಎನ್ನವ ಮಾತನ್ನುಹೇಳಿದರು. ಆ ಸಭೆಯಲ್ಲಿ ಸನ್ಮಾನ್ಯ ಪ್ರಕಾಶ್ ರವರೂ ಕೂಡ ಇದ್ದರು. ಈ ತರಹ ಹೇಳಿಕೆಯನ್ನು ಕೊಡಬೇಡಿ, ಜನ ತಪ್ಪು ತಿಳಿದುಕೊಳ್ಳುತ್ತಾರೆ ಎಂದು ಆ ಸಭೆಯಲ್ಲಿಯೇ ನಾನು ಖಂಡಿಸಿದೆ. ಹಣ ಕೊಡದೆಯೇ 50 ಲಕ್ಷರೂ ಕೊಟ್ಟಿದ್ದೇವೆಂದು ಹೇಳಿದರು, ಆ 50 ಲಕ್ಷ ರೂ ಏನಾಯಿತು ಎಂದು ಜನ ತಪ್ಪು ತಿಳಿದುಕೊಳ್ಳುತ್ತಾರೆಂದು ಅವರನ್ನು ಖಂಡಿಸಿದೆ. ಅದರ ನಂತರ 4 ಸಭೆಯನ್ನು ಮಾಡಿದ್ದಾರೆ. ನಾನು ಆ ಸಭೆಗಳಿಗೆ ಹೋಗಲಿಲ್ಲ. ಆ 4 ಸಭೆಯಲ್ಲಿ ಪ್ರತಿ ವರ್ಷ 50 ಲಕ್ಷ ರೂ.ಗಳನ್ನು ಕೊಡುತ್ತಾ ಬರುತ್ತಿದ್ದೇವೆಂದು ಹೇಳುತ್ತಾರೆ. ಅಂದಮೇಲೆ ಈ ಕ್ಷೇತ್ರದ ಜನ ನನ್ನ ಮೇಲೆ ತಪ್ಪು ತಿಳಿದುಕೊಳ್ಳುವುದಿಲ್ಲವೇ? ಈ 2 ಕೋಟಿ ರೂಪಾಯಿ ಬರಬೇಕಲ್ಲವೇ? ಇವರು ಕೊಟ್ಟಿರುವ ಲೆಕ್ಕದಂತೆ ಒಂದು ಕೋಟಿ ರೂಪಾಯಿ ಆಗುತ್ತದೆ. ಈ ಒಂದು ಕೋಟಿ ರೂಪಾಯಿಯಲ್ಲಿ ಖರ್ಚು ಆಗಿರತ್ಕಂಥದ್ದು ಕೇವಲ 50 ಲಕ್ಷ ರೂ. ಮಾತ್ರ. 60 ಲಕ್ಷ ರೂ. ಸ್ಪಿಲ್ ಓವರ್ ಹಾಕಿಕೊಂಡಿದ್ದೇ ವೆಂದು ಹೇಳಿದರೂ ಕೂಡ ಇವರ ಒಂದು ಕೋಟಿ ರೂ. ಲೆಕ್ಕಕ್ಕಿಂತ ಹೆಚ್ಚಿಗೆ ಆಗುತ್ತದೆ. ಇದರ ಬಗ್ಗೆ ಪೂರ್ತಿ ವಿವರ ಏನು ಇದೆ ಅದನ್ನು ದಯಮಾಡಿ ಸನ್ಮಾನ್ಯ ಮಂತ್ರಿಗಳು ನನಗೆ ಕಳುಹಿಸಿಕೊಡಬೇಕು.

ಶ್ರೀ ಕೆ.ವೆಂಕಟೇಶ್ :ಮಾನ್ಯ ಉಪಾಧ್ಯಕ್ಷರೆ, 1998-99ರಲ್ಲಿ 64 ಲಕ್ಷ ರೂ.ಗಳ ಸ್ಪಿಲ್ ಓವರ್ ಇದೆ ಪ್ಲಸ್ ನಿಮಗೆ ಹೊಸ ಕಾಮಗಾರಿಗೆ 24 ಲಕ್ಷ ರೂ ಕೊಟ್ಟಿದ್ದೇವೆ. ಸ್ಪಿಲ್ ಓವರ್ ಕಾಮಗಾರಿಗೆ 2 ಲಕ್ಷ ರೂ ಕೊಡುವಲ್ಲಿ ಒಂದು ಲಕ್ಷ ರೂ.ಗಳನ್ನು ಮಾತ್ರ ಕೊಟ್ಟಿದ್ದೀರೆಂದು ಹೇಳಿದಿರಿ. ಬಜೆಟ್ ಆಲೋಕೇಷನ್ ಕಡಿಮೆಯಾದರಿಂದ ಅಡ್ಜಸ್ಟ್ ಮಾಡಿ ಕೊಡಬೇಕಾಗುತ್ತದೆ. ತಾವು ಪೂರ್ಣ ಕೆಲಸ ಮಾಡಿಸಿದರೆ ಅದಕ್ಕೆ ಪೂರ್ಣ ಹಣವನ್ನು ಪಾವತಿ ಮಾಡಲಾಗುವುದು.

ಶ್ರೀ ಬಿ.ಬಿ.ಶಿವಪ್ಪ : ಮಾನ್ಯ ಉಪಾಧ್ಯಕ್ಷರೆ, 1 ಲಕ್ಷ ವೆಚ್ಚದ ಕೆಲಸ , 2 ಲಕ್ಷ ಖರ್ಚಿನ ಕೆಲಸ, 5ಲಕ್ಷದ ಒಳಗೆ ಬರತಕ್ಕಂಥ ಯಾವುದೇ ಕಾಮಗಾರಿ ಇದ್ದರೆ ಕೂಡ ಹಣ ಪೂರ್ತಿ ಬಿಡುಗಡೆ ಮಾಡಬೇಕು. ಆದರೆ ಆ ಕೆಲಸ ಆಗಿಲ್ಲ. ಈವಾಗ ಮಾರ್ಚ್ ಕೊನೆ ಆಗುತ್ತಿದೆ. ಕೆಲಸ ಪೂರ್ತಿ ಮಾಡಿ ಹಣಕ್ಕೆ ಎಲ್ಲರೂ ಬರುತ್ತಾರೆ . ಹಣ ಬಿಡುಗಡೆ ಆಗದೇ ಇದ್ದರೆ ಕೆಲಸ ಎಷ್ಟರ ಮಟ್ಟಿಗೆ ಆಗುತ್ತದೆ?

ಶ್ರೀ ಕೆ.ವೆಂಕಟೇಶ್ : ಮಾನ್ಯ ಉಪಾಧ್ಯಕ್ಷರೆ,ಪೂರ್ಣ ಮಾಡಿದಂಥ ಕಾಮಗಾರಿ ಕೆಲಸಕ್ಕೆ ಪೂರ್ತಿ ಹಣವನ್ನು ಕೊಡುತ್ತೇವೆ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ

86(563) ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೊಸದಾಗಿ ನೀರಾವರಿ ಪಂಪುಸೆಟ್ಟುಗೆ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ;

ಆ) ಇವರಿಗೆ ಯಾವಾಗ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು; ಹಾಗೂ ವಿಳಂಬವಾಗಲು ಕಾರಣಗಳೇನು?

ಶ್ರೀಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು):

ಅ) 1998-99ರ ಸಾಲಿನಲ್ಲಿ ಫೆಬ್ರುವರಿ 99ರ ಅಂತ್ಯದವರೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೊಸದಾಗಿ ನೀರಾವರಿ ಪಂಪು ಸೆಟ್‌ಗೆ ವಿದ್ಯುತ್ ಸಂಪಕಕ್ಕಾಗಿ ನೊಂದಾಯಿತಗೊಂಡ ಅರ್ಜಿಗಳ ಸಂಖ್ಯೆ ಅನುಕ್ರಮವಾಗಿ 4720 ಮತ್ತು 1409.

ಆ) ಮಂಡಳಿಯ ಉಪವಿಭಾಗ ಕಛೇರಿಯಲ್ಲಿ ಅರ್ಜಿ ನೋಂದಾಯಿಸಿ, ಅಗತ್ಯವಾದ ನಿಯಮಗಳನ್ನು ಪಾಲಿಸಿದಅರ್ಜಿದಾರರಿಗೆ ಕಾರ್ಯಾದೇಶಗಳನ್ನು ನೀಡಲಾಗುತ್ತದೆ. ಹೀಗೆ ಕಾರ್ಯಾದೇಶ ಪಡೆದ ಅರ್ಜಿಗಳನ್ನು ಕಾರ್ಯ ದೇಶದ ಸಂಖ್ಯೆ ಹಾಗೂ ದಿನಾಂಕವನ್ನು ಅನುಸರಿಸಿ ವಿವಿಧ ಪ್ರವರ್ಗಗಳನ್ನಾಗಿ ಅಂದರೆ ಪರಿಶಿಷ್ಟ ಜಾತಿ/ಪಂಗಡ, ನೂರು ಬಾವಿ ಯೋಜನೆ, ಗಂಗಾಕಲ್ಯಾಣಯೋಜನೆ, ಕೇವಲ ಸರ್ವೀಸ್ ಕನೆಕ್ಷನ್ ಕೆಲಸಗಳು,ಭೂ ಅಭಿವೃದ್ಧಿಬ್ಯಾಂಕ್ ಫಲಾನುಭವಿಗಳು, ಏತ ನೀರಾವರಿ ಯೋಜನೆಗಳು, ಸಾಮಾನ್ಯ ವರ್ಗಗಳು ಹೀಗೆ ವಿಂಗಡಿಸಿ ಆಯಾ ಪ್ರವರ್ಗಗಳಲ್ಲಿ ಜೇಷ್ಠತೆಯನ್ನು ನಿಗದಿ ಪಡಿಸಲಾಗುತ್ತದೆ. ಜೇಷ್ಠತೆಯನ್ನು ನಿಗದಿಪಡಿಸಿದ ನಂತರ ಆದ್ಯತಾ ಪಟ್ಟಿಯಲ್ಲಿ ಜೇಷ್ಠತೆಗೆ ಅನುಸಾರವಾಗಿ ವಿದ್ಯುದೀಕರಣ